ವಿವರವಾಗಿ ಲಾಯರಿಗೆ ಹೇಳು. ಆಸ್ತಿ ಪಾಸ್ತಿ ಏನೂ ಬೇಡ ಎಂಬ ನಿನ್ನ ಭಾವನೆಗಳು ಲಾಯರಿಗೆ ಬೇಕಾದ್ದಲ್ಲ. ಆದ್ದರಿಂದ ಆ ಬಗ್ಗೆ ಮಾತಾಡಬೇಡ' ಎಂದು ಹೇಳಿದ್ದ.

ಲಾಯರ್ ಪಶುಪತಿಗೆ ಮುರಾರಿ ನರಹರಿ ಮತ್ತು ಅಭಿಯ ಪರಿಚಯ ಮಾಡಿಸಿದ ಬಳಿಕ ಅಭಿ ಲಾಯರೊಡನೆ, 'ಸರ್, ನೀವು ನನ್ನ ಅಪ್ಪನ ಬಳಿ ಎಲ್ಲಾ ವಿಚಾರಗಳನ್ನೂ ಕೇಳಿ ತಿಳಿದುಕೊಳ್ಳಬಹುದು. ನಾವು ಅವರ ಜೊತೆ ಕುಳಿತರೆ ಅವರಿಗೆ ಕೆಲವು ವಿಷಯಗಳನ್ನು ಮಾತಾಡಲು ಮುಜುಗರ ಆಗಬಹುದು. ಆದುದರಿಂದ ನಾವು ಹೊರಗಡೆ ಕುಳಿತುಕೊಳ್ಳುತ್ತೇವೆ' ಎಂದ.

ಕೂಡಲೇ ಮುರಾರಿ, 'ಹಾಗಲ್ಲ ಅಭಿ, ಸತ್ಯ ಸತ್ಯವೇ. ಸತ್ಯವನ್ನು ಹೇಳಲು ಮುಜುಗರ ಆದರೂ ಅದನ್ನು ಸಹಿಸಿಕೊಳ್ಳಬೇಕು. ಆದ್ದರಿಂದ ಅಭಿ, ನೀನು ನಿನ್ನ ಅಪ್ಪನ ಜೊತೆಯಲ್ಲಿಯೇ ಕುಳಿತುಕೊ' ಎಂದ.

ಮುರಾರಿಯ ಮಾತು ಸರಿಯೆನಿಸಿತು ಅಭಿಗೆ. ಅವನು ಲಾಯರ ಎದುರು ಅಪ್ಪನ ಜೊತೆ ಕುಳಿತ. ಸನ್ಮತಿ ಮತ್ತು ಅಮರೇಶ ನರಹರಿಯ ಜೊತೆ ನಡೆಸಿದ ವ್ಯವಹಾರದ ಬಗ್ಗೆ ನರಹರಿ ವಿವರವಾಗಿ ಹೇಳಿದ ನಂತರ ಪಶುಪತಿ, 'ನಿಮ್ಮ ಹೆಂಡತಿಯ ಸಾವಿನಲ್ಲಿ ಸನ್ಮತಿಯ ಕೈವಾಡ ಇರುವ ಸಾಧ್ಯತೆ ಇದೆ ಎಂದು ನನಗೆ ಅನಿಸುತ್ತದೆ. ಪ್ರಪಂಚದಲ್ಲಿ ಅತಿ ಹೆಚ್ಚು ಅಪರಾಧಗಳು ಮತ್ತು ಕೊಲೆಗಳಿಗೆ ಕಾರಣ ಕಾಮ ಮತ್ತು ಹಣ. ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಆಗಿರುವುದು ತುಂಬಾ ಕಡಿಮೆ. ಈ ಕುರಿತು ಒಂದು ಒಂದು ಸಮೀಕ್ಷೆ ನಡೆಯಬೇಕು ಅಂದುಕೊಳ್ಳುತ್ತೇನೆ. ಭಾರತ ದೇಶ ಮಾಡದು. ಬಿಬಿಸಿಯಾದರೂ ಮಾಡಬಾರದೇ" ಎಂದು ಪಶುಪತಿ ಜೋರಾಗಿ ನಕ್ಕು, 'ಮನುಷ್ಯ ತೀವ್ರವಾಗಿ ಪ್ರೀತಿಸುವ ಮತ್ತು ಮೋಹಿಸುವ ಹೆಣ್ಣು ಮತ್ತು ಹಣ ಅವನ ಶತ್ರುವೇ ಆಗಿರುವುದು ಎಂಥ ವಿಪರ್ಯಾಸ' ಎಂದು ಸ್ವಲ್ಪ ಹೊತ್ತು ಗಂಭೀರವಾಗಿದ್ದ ಪಶುಪತಿ, ಇನ್ನಷ್ಟು ಗಂಭೀರವಾಗಿ, 'ಯೋಚಿಸಿ ನರಹರಿ, ನಿಮ್ಮ ಗಳಿಕೆಯಿಂದಲೇ ನೀವು ಪಡೆದ ಆಸ್ತಿಪಾಸ್ತಿ ಬೇಡ ಎಂಬ ಭಾವನೆ ವಿವೇಕವಲ್ಲ. ನ್ಯಾಯವೂ ಅಲ್ಲ. ಅದು ನಿಮ್ಮ ಭಯ ಅಥವಾ ಪುಕ್ಕಲುತನ ಅನಿಸಿಕೊಳ್ಳುತ್ತದೆ. ಅನ್ಯಾಯದ ವಿರುದ್ಧ ಹೋರಾಡಲೇ ಬೇಕು. ಕೋರ್ಟ್‌ಗೆ ಹೋದರೆ ನಿಮಗೆ ನ್ಯಾಯ ಸಿಗುತ್ತದೆ. ಕೋರ್ಟ್‌ಗೆ ಹೋಗುವುದು ತಪ್ಪು ಅಂತ ನಿಮ್ಮ ಭಾವನೆಯೆ?' ಪಶುಪತಿ ಕೇಳಿದರು. ನರಹರಿಯ ಬಳಿ ಉತ್ತರವಿರಲಿಲ್ಲ. 'ಹೇಳಿ' ಎಂದ ಲಾಯರ್ ಪಶುಪತಿ ಅಮರೇಶ ಮತ್ತು ಸನ್ಮತಿಗೆ ನಿಮ್ಮ ಮನೆ ಮತ್ತು ಆಸ್ತಿ ಕೊಟ್ಟು ಬಿಡುವುದು ಔದಾರ್ಯವಲ್ಲ ನರಹರಿ, ಅದು ಹೇಡಿತನ. ಕಾನೂನು ಮಾಡಿರುವುದು ವಂಚಕರ ಸಹಾಯಕ್ಕೆ ಅಲ್ಲ, ಕಾನೂನು ಮಾಡಿರುವುದು ಸತ್ಯವಂತರ ಸಹಾಯಕ್ಕೆ. ನೀವು ಬೀಗ ಮುರಿದು ಮನೆಯ ಒಳಗೆ ಹೋಗಿ. ಅದು ನಿಮ್ಮ ಮನೆ' ಎಂದು ನಕ್ಕರು 80 ವರ್ಷದ ತರುಣ ಮನಸ್ಸಿನ ಪಶುಪತಿ.

ಅಭಿ ಎದ್ದು ನಿಂತು, 'ಸರ್ ನಿಮ್ಮ ಫೀಸು' ಎಂದು ಜೇಬಿಗೆ ಕೈ ಹಾಕಿದಾಗ ಪಶುಪತಿ 'ನಾನು ಕಾನೂನು ಸಲಹೆಗೆ ಫೀಸು ತೆಗೆದುಕೊಳ್ಳುವುದಿಲ್ಲ. ಅಲ್ಲದೆ, ಎಲ್ಲಾ ಕೇಸುಗಳಿಗೂ ಫೀಸು ತೆಗೆದುಕೊಳ್ಳುವುದಿಲ್ಲ. ಕೆಲವೇ ಕೆಲವು ಕೇಸುಗಳಿಗೆ ಫೀಸು ತೆಗೆದುಕೊಳ್ಳುತ್ತೇನೆ. ಇನ್ನು ಉಳಿದಿರುವ ಆಯುಸ್ಸಿಗೆ ಬೇಕಾದಷ್ಟು ಅನುಕೂಲ ನನ್ನ ಬಳಿ ಇದೆ. ಅದರಲ್ಲಿ ಮುಕ್ಕಾಲು ಪಾಲು ತಂದೆಯಿಂದ ಬಂದದ್ದು. ಆದ್ದರಿಂದ ಹೆಚ್ಚು ಸಂಪಾದನೆ ಮಾಡಲಿಲ್ಲ. ನೀವು ಕಳ್ಳರಿಗೆ ವಂಚಕರಿಗೆ ಯಾಕೆ ಕೊಡುತ್ತೀರಿ ನರಹರಿ? ನಿಮ್ಮ ಮಕ್ಕಳಿಗಿರಲಿ ಬಿಡಿ' ಎಂದು ನಕ್ಕು ಆ ವಂಚಕರಿಗೆ ವ್ಯಾಜ್ಯ ಹೂಡಲು ಗ್ರೌಂಡ್ಸ್ ಇಲ್ಲ. ಅಂಥದೇನಾದರೂ ಮಾಡಿದರೆ, ನನಗೆ ಕಾಲ್ ಮಾಡಿ; ಏನು ಮಾಡಬೇಕು ಅಂತ ನಾನು ಹೇಳ್ತೀನಿ' ಎಂದು, 'ಅವರಿಬ್ಬರಿಗೂ ಕೆಲವು ವರ್ಷಗಳ ಕಾಲ ವಾಸಿಸಲು ಸರಕಾರಿ ಮನೆ ದೊರೆಯುವ ಹಾಗೆ ಏರ್ಪಾಡು ಮಾಡುವ' ಎಂದು ನಕ್ಕರು ಪಶುಪತಿ.

ಎಲ್ಲರೂ ಹೋಗಲು ಎದ್ದು ನಿಂತಾಗ, ಪಶುಪತಿ, 'ಸಕಲೇಶಪುರದಲ್ಲಿ ಹೊಳೆ ಇದೆಯಲ್ಲಾ?' ಎಂದರು.

'ಇದೆ ಸರ್' ಎಂದ ಅಭಿ.

'ನಾನು ನಿಮಗೆ ಒಬ್ಬ ಫೈಲ್ವಾನನ್ನು ತೋರಿಸ್ತೇನೆ. ಅವನು ನಿಮ್ಮ ಅಮರೇಶ ಮತ್ತು ಸನ್ಮತಿ ಇಬ್ಬರನ್ನೂ ಎತ್ತಿ ಹೊಳೆಗೆ ಎಸೆಯುತ್ತಾನೆ' ಎಂದು ನಕ್ಕರು.

'ಯಾರು ಸರ್ ಫೈಲ್ವಾನ್?' ಎಂದು ಕೇಳಿದ ಮುರಾರಿ.

'ಮತ್ಯಾರು ನೀನೇ, ಕರ್ಕೊಂಡು ಹೋಗಿ ಇವನನ್ನು' ಎಂದು ನಕ್ಕರು ಪಶುಪತಿ. ಆ ಮಾತಿಗೆ ಫೈಲ್ವಾನಂತಿದ್ದ ಮುರಾರಿಯ ಸಹಿತ ಎಲ್ಲರೂ ನಕ್ಕರು.

ಪಶುಪತಿ ನರಹರಿ ಮತ್ತು ಅಭಿಯೊಡನೆ, 'ನೀವು ಅಮರೇಶ ಮತ್ತು ಸನ್ಮತಿಯ ಕುರಿತು ನನಗೆ ಹೇಳಿದ್ದು ಮತ್ತು ಹೇಳದೆ ಉಳಿದಿರುವುದು, ಅಂದರೆ ಅವರು ನಿಮ್ಮ ಸಂಪರ್ಕಕ್ಕೆ ಬಂದ ದಿನದಿಂದ ಆರಂಭವಾಗಿ ಎಲ್ಲವನ್ನೂ ವಿವರವಾಗಿ ಬರೆದು ನನಗೆ ಕಳಿಸಿ. ಅವರು ಎಲ್ಲಿದ್ದಾರೆ ಎಂದು ಪತ್ತೆ ಹಚ್ಚಲು ಸಾಧ್ಯವಾಗಬಹುದು. ಅವರು ಎಲ್ಲೇ ಇರಲಿ, ಜೀವಂತವಾಗಿದ್ದರೆ, ಅವರನ್ನು ಪತ್ತೆ ಹಚ್ಚಬಲ್ಲ ಸ್ನೇಹಿತರು ನನಗೆ ಇದ್ದಾರೆ, ಸ್ನೇಹಿತರು ಯಾರು ಎಂಬ ವಿಚಾರ ನಿಮಗೆ ಬೇಡ' ಎಂದರು.

ಆ ಸಂಜೆ ಅಭಿ ಹೊರ ಹೋಗಿ ಶಮಿ ಮತ್ತು ಕಾಂತಿಗಾಗಿ ಮಕ್ಕಳು ಇಷ್ಟಪಟ್ಟು ಓದುವಂಥ ನಾಲ್ಕೈದು ಪುಸ್ತಕಗಳನ್ನು ತಂದ. 'ರಾತ್ರಿಯ ಊಟವನ್ನು ಸ್ವಲ್ಪ ಬೇಗನೆ ಮುಗಿಸೋಣ' ಎಂದು ಹೇಳಿ, ಸುಕೃತಿಯೊಡನೆ, 'ಈ ಪುಸ್ತಕಗಳನ್ನು ಮಕ್ಕಳಿಗೆ ಕೊಡು. ಓದಲಿ. ನಿದ್ದೆ ಬಂದಾಗ ನಿದ್ದೆ ಮಾಡಲಿ. ನಾವು ಕೆಲವು ವಿಷಯಗಳನ್ನ ಮಾತಾಡಬೇಕಿದೆ' ಎಂದ

ಊಟ ಮುಗಿಸಿ ಮಕ್ಕಳನ್ನು ಅವರ ಕೋಣೆಗೆ ಕಳಿಸಿದ ನಂತರ ನರಹರಿ, ಅಭಿ ಮತ್ತು ಸುಕೃತಿ ಅಭಿಯ ಸಲಹೆಯಂತೆ ಮಾತುಕತೆಗೆ ಅಣಿಯಾದರು. ಅಭಿ ಹೇಳಿದ,'ನೀನು ಮನಬಿಚ್ಚಿ ಹೇಳಲಿಕ್ಕಿರುವುದನ್ನೆಲ್ಲ ಹೇಳಬೇಕು ಸುಕೃತಿ. ಆಗಬೇಕಾದ್ದು ಆಗಿಹೋಗಿದೆ. ಈಗ ನಾವು ಯೋಚಿಸಬೇಕಾದ್ದು ನಾವು ಮುಂದೆ ಹೋಗಬೇಕಾದ ದಾರಿಯ ಬಗ್ಗೆ' ಎಂದ.

ಮಾತು ಆರಂಭಿಸುವ ಮೊದಲೇ ಸುಕೃತಿಗೆ ಅಳು ಒತ್ತರಿಸಿ ಬಂತು.

'ಅಳುವನ್ನು ಸ್ವಲ್ಪ ತಡೆದುಕೊಂಡು ಮಾತಾಡು. ನಿನಗೆ ಒದಗಿದ ದುಸ್ಥಿತಿ, ಅದಕ್ಕೆ ಕಾರಣವಾದ ಸಂಗತಿಗಳು, ನಿನ್ನ ನಡೆ ನುಡಿಯಲ್ಲಿ ಆದ ನಾವೆಂದೂ ನಿರೀಕ್ಷಿಸದ ಬದಲಾವಣೆಗಳು ಎಲ್ಲದರ ಬಗ್ಗೆಯೂ ನೀನು ಹೇಳಬೇಕು. ಹಾಗೆ ಹೃದಯ ತೆರೆದು ಹೇಳಬೇಕಾದ್ದು ಮುಂದಿನ ನಿನ್ನ ಬದುಕು ಹೇಗಿರಬೇಕು ಎಂಬ ಬಗ್ಗೆ ನಿನ್ನ ಜೊತೆ ನಾನು ಮತ್ತು ಅಪ್ಪ ಯೋಚಿಸಲು ಸಾಧ್ಯ' ಎಂದ ಅಭಿ.

ಐದು ನಿಮಿಷ ಮೌನವಾಗಿ ತಲೆ ಕೆಳಹಾಕಿ ಕುಳಿತಳು ಸುಕೃತಿ. ಅನಂತರ ದುಃಖ ತಡೆದುಕೊಂಡು ಮಾತಾಡಿದಳು, 'ನಾನು ಮದುವೆಯಾಗ ಬೇಕಾದ ವ್ಯಕ್ತಿ ಹೇಗಿರಬೇಕು ಎಂದು ಯೋಚಿಸದೆ ಮದುವೆಯಾದದ್ದು ನಾನು ಮಾಡಿದ ಮೊದಲ ತಪ್ಪು' ಕಣ್ಣೀರು ಒರೆಸಿಕೊಂಡು ಸುಕೃತಿ ಮಾತು ಮುಂದರಿಸಿದಳು, 'ಪ್ರೇಮ' ಅಂತ ಒಂದು ಇಲ್ಲ. ಇದ್ದರೂ ಅದು ತುಂಬಾ ಅಸ್ಥಿರ, ಬಹಳ ಕಾಲ ಇರುವಂಥದಲ್ಲ ಎಂದು ನನಗೆ ಅರಿವಾದದ್ದು ಕರುಣಾನಿಧಿಯನ್ನು ಮದುವೆಯಾದ ಮೇಲೆಯೆ. ಅವನೊಬ್ಬ ದ್ರವ್ಯ ದಾಹಿ ಎಂದು ಗೊತ್ತಾದ್ದು ಮದುವೆಯಾಗಿ ಬಹಳ ದಿನಗಳ ನಂತರ. ಮದುವೆಯ ನಂತರವೆ. ಅವನಿಗೆ ಕುಡಿತದ ಚಟವಿತ್ತು ಎಂಬುದು ಗೊತ್ತಾದ್ದು ಮಕ್ಕಳು ಹುಟ್ಟಿದ ಮೇಲೆಯೆ. 'ತಂದೆಯ ಬಳಿ ಕೋಟಿ ಕೋಟಿ ಹಣ ಇದೆ, ಕೇಳು' ಎಂದು ಕರುಣಾನಿಧಿ ಒಂದೇ ಸವನೆ ಪೀಡಿಸತೊಡಗಿದ. ಅತ್ಯಂತ ಹೇಯವಾಗಿ ನನ್ನನ್ನು ಬೈಯುತ್ತಿದ್ದ, ಹೊಡೆಯುತ್ತಿದ್ದ. ಅವನ ನಡತೆಯಿಂದಾಗಿ ನಾನು ಕೂಡ ಬದುಕುವ ಆಸೆ ಬಿಟ್ಟು ಅವನನ್ನು ಬಾಯಿಗೆ ಬಂದ ಹಾಗೆ ಬೈಯತೊಡಗಿದೆ. ಮಕ್ಕಳ ಮೇಲೆ ನಮ್ಮ ಜಗಳದ ಪರಿಣಾಮ ಏನಾಗಬಹುದೊ ಎಂಬ ಆತಂಕ ಸದಾ ನನ್ನನ್ನು ಕಾಡುತ್ತಿತ್ತು. ಆದರೆ ಅಷ್ಟರಲ್ಲೇ ನನ್ನ ಮನುಷ್ಯತ್ವ ಕೆಟ್ಟುಹೋಗಿತ್ತು. ಇನ್ನು ನನ್ನ ಬದುಕು ಇದೇ, ಹೀಗೆಯೇ ಎಂದೆನಿಸತೊಡಗಿತ್ತು. ಕರುಣಾನಿಧಿ ನನ್ನನ್ನು

## ಹೆಬ್ಬೆರಳು

ಮನೆಗೆ ಮಹಿಳೆಯಂತೆ
ಕೈಗೆ ಹೆಬ್ಬೆರಳು
ಆ ಬೆರಳಿಗೆ ಸ್ವಲ್ಪ ತೊಡಕಾದರೂ
ಕೈಯ ಎಲ್ಲ ಕೆಲಸಗಳೂ
ಏರುಪೇರು!

★ ಡಾ. ವಿನಯ ಶ್ರೀನಿವಾಸ್

